ಅರ್ಪಣ್ ಎಸ್.ಎಂ. ಮೈಸೂರು
*ಬರವಣಿಗೆ ಮತ್ತು ಓದುವುದು ಬರೀ ಹವ್ಯಾಸವಾಗಿದ್ದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ನೀವೇನಂತೀರಿ?*



ನಿಮ್ಮ ಅಭಿಪ್ರಾಯವನ್ನು ಬೋರ್ಡ್ ಬರೆಯುವವರ ಸಂಘ ಮತ್ತು ನ್ಯೂಸ್ ರೀಡರ್ಸ್ ಅಸೋಸಿಯೇಷನ್ ಖಂಡಿಸಿವೆ.

ಎಚ್.ಆರ್. ದೇಸಾಯಿ, ರಾಯಚೂರು
*ತವರಿಗೆ ಹೋದ ಹೆಂಡತಿಯ ಕಾಟವಿಲ್ಲ, ಸೊಳ್ಳೆ, ತಿಗಣೆಗಳಿಲ್ಲ. ಆದರೂ ಸುಖನಿದ್ರೆ ಏಕೆ ಬರುತ್ತಿಲ್ಲ?*
ಮೊದಲು ಆ ಕಿರುಗುಟ್ಟುವ ಫ್ಯಾನ್, ಧಡಧಡಾ ಅನ್ನೋ ಫ್ರಿಡ್ಜ್ ರಿಪೇರಿ ಮಾಡಿಸಿ ಮಾರಾಯ್ರೇ.

ವಿ. ಹಮೀದ್, ವಿಟ್ಲ
*ಇಲ್ಲೊಬ್ಬ ವರ ವಿವಾಹದ ದಿನ ಬಿಳಿಯ ಬಟ್ಟೆಯನ್ನು ತೊಟ್ಟಿದ್ದಾನಲ್ಲಾ...?*
ಗುಡ್. ಬಿಳಿ ಶರಣಾಗತಿಯ ಸಂಕೇತ.

ಎಸ್. ಶ್ರೀಕಂಠೇಶ್ವರ, ಬೆಂಗಳೂರು
*ಎಲ್ಲ ಗಂಡಸರೂ ತಮ್ಮ ಜೇಬಿನಲ್ಲಿರುವ ಪರ್ಸ್‌ನಲ್ಲಿ ಹೆಂಡತಿಯ ಫೋಟೋ ಇಟ್ಟಿರುತ್ತಾರೆ. ಏಕೆ?*



ಪರ್ಸ್ ಏಕೆ ಖಾಲಿಯಾಗಿದೆ ಎಂದು ಯಾರಾದರೂ ಕೇಳಿದರೆ ಕಾರಣ ತೋರಿಸಕ್ಕೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಹುಟ್ಟಿದಾಗ ಕಟ್ಟುವ ತೊಟ್ಟಿಲಿಗೂ, ಸತ್ತಾಗ ಕಟ್ಟುವ ಚಟ್ಟಕ್ಕೂ ಏನು ವ್ಯತ್ಯಾಸ?*
ತೊಟ್ಟಿಲನ್ನು ಬೇರೆ ಮಕ್ಕಳಿಗೂ ರಿಸೈಕಲ್ ಮಾಡಬಹುದು. ಚಟ್ಟ ಯೂಸ್ & ತ್ರೋ/ಬರ್ನ್.

ಎಂ.ಎ. ಕುಮಾರ್, ಬೆಂಗಳೂರು
*ಎಲ್ಲಾ ಗಂಡು ದೇವರುಗಳಿಗೆ ನುಣುಪಾದ ಕೆನ್ನೆ ಇರುವುದರ ಗುಟ್ಟೇನು?*
ಬಾಲ್ಯದಿಂದಲೇ ಪೂಜಿಸಲ್ಪಟ್ಟಾಗ ಕೆನ್ನೆಗೆ ಧಾರಾಳವಾಗಿ ಹಚ್ಚಿದ ಅರಿಶಿನದ ಪ್ರಭಾವ!

ಬೂಕನಕೆರೆ ವಿಜೇಂದ್ರ, ಮೈಸೂರು
*ಕೆಲವು ಹುಡುಗರು ಹುಡುಗಿಯರನ್ನು ಕಂಡ ತಕ್ಷಣ ಹಾರನ್ ಮಾಡುವುದೇಕೆ?*
ತಾವು ತುಂಬ ಸೌಂಡ್ ಪಾರ್ಟಿ ಎಂದು ಸೂಚಿಸಲು!

ಮಹಾವೀರ ಕಾಸರ, ಶಿವಮೊಗ್ಗ
*ಕಾಳಸಂತೆಗೆ ಹೊರತಾದದ್ದು ಯಾವುದು?*
ಕನ್ನಡ ಪುಸ್ತಕ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
*ಅರ್ಜುನನ ಪ್ರಭಾವಳಿಯ ಬೆಳಕಿಗೆ ಧರ್ಮರಾಯ ಆಟಕ್ಕುಂಟು, ಲೆಕ್ಕಕ್ಕಿಲ್ಲ ಎಂಬಂತಾದನೆ ಸಾರ್?*
ಶರ್ಟ್ ಎಷ್ಟೇ ಹೊಳೆದರೂ ಗುಂಡಿ ಇಲ್ಲದೆ ಹಾಕಿಕೊಳ್ಳಲಾದೀತೆ? ಅರ್ಜುನ ಶರ್ಟ್; ಧರ್ಮಜ ಗುಂಡಿ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಹೆಣವನ್ನು ಸತ್ತ ಹೆಣ ಎಂದು ಏಕೆ ಕರೆಯುತ್ತಾರೆ ರಾಂ?*
ಬದುಕಿರುವ ಹೆಣಗಳೂ ಸದನದಲ್ಲಿ ಮತ್ತು ಅಲ್ಲಲ್ಲಿ ಕಂಡುಬರುವುದರಿಂದ.

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ
*ಹೆಣ್ಣಿನ ಮನಸ್ಸನ್ನು ಅರ್ಥ ಮಾಡಿಕೊಳ್ಳುವ ವಿದ್ಯೆಯನ್ನು ಹೇಳಿಕೊಡುವಿರಾ ಸಾರ್?*
ಸಾಧ್ಯವಿಲ್ಲ. ಹೆಣ್ಣು ಮೊಬೈಲ್‌ಗಳಂತೆ. ಅರ್ಥ ಮಾಡಿಕೊಂಡು ಹೇಳಿಕೊಡುವಷ್ಟರಲ್ಲಿ ಮಾಡಲ್ ಚೇಂಜ್!

ಪಿ.ಜೆ. ರಾಘವೇಂದ್ರ, ಮೈಸೂರು
*ಬುದ್ಧಿವಂತರಿಗೂ, ಬುದ್ಧಿಜೀವಿಗಳಿಗೂ ಏನು ವ್ಯತ್ಯಾಸ?*
ಬುದ್ಧಿವಂತ ವಿಚಾರವಾದಿ; ಬುದ್ಧಿಜೀವಿ ಅವಕಾಶವಾದಿ.

ಆರತಿ ಘಟಿಕಾರ್, ದುಬೈ
*ನಾರಿ ಮೂಲ, ಋಷಿ ಮೂಲ ಕೇಳಬಾರದಂತೆ. ಲಂಚದ ಮೂಲ?*
ಆದಿಯಲ್ಲೇ. ಲಂಚ ಸೇಬು. ಕೊಟ್ಟಿದ್ದು ಈವ್; ಪಡೆದದ್ದು ಆಡಮ್!

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ
*ಒಂದು ವೇಳೆ ಮನುಷ್ಯನ ಬುದ್ಧಿ ಮೆದುಳಿನಲ್ಲಿ ಇರದೆ ತಲೆಕೂದಲಿನಲ್ಲಿ ಇದ್ದಿದ್ದರೆ ಪರಿಣಾಮ ಏನಾಗುತ್ತಿತ್ತು?*
ತಿರುಪತಿಯಲ್ಲಿ ಬುದ್ಧಿ ಮಾರಾಟ ಕೇಂದ್ರ ಸ್ಥಾಪನೆಯಾಗುತ್ತಿತ್ತು.

ದೇವೇಂದ್ರ, ಕಡೂರು
*ಬೇಕೆಂದಾಗಲೆಲ್ಲ ದೇವರು ಕೈಗೆ ಸಿಗುವ ಹಾಗೆ ಇದ್ದಿದ್ದರೆ?*
ಸ್ಟ್ರೆಸ್ ತಡೆಯಲಾರದೆ ದೇವ ತನ್ನ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಿದ್ದ.

ಎ.ವಿ. ಲಕ್ಷ್ಮಿ, ನರಗುಂದ
*ಗುರುವಿನ ಅಗತ್ಯವಿಲ್ಲದೆ ಎಲ್ಲರೂ ಸುಲಭವಾಗಿ ಕಲಿಯುವ ವಿದ್ಯೆ ಯಾವುದು ರಾಮ್‌ಜಿ?*
ಹೆಣ್ಣಿಗೆ ಕನ್ನಡಿ ನೋಡುವುದು; ಗಂಡಿಗೆ ಹೆಣ್ಣನ್ನು ನೋಡುವುದು!

ಸುಂದರ್, ಬೆಂಗಳೂರು
*ಕಾರ್ ಮೇಲೆ ಕಾಗೆ ಕೂತರೆ ನೂತನ ಕಾರ್ ಭಾಗ್ಯ; ಹದ್ದು ಕೂತರೆ?*



ಹದ್ದು ಮೀರಿದ ಪ್ರಶ್ನೆ!

ದಿನೇಶ್, ಗುಡ್ಡದೂರು
*ಯಮಲೋಕಕ್ಕೆ ಹೋಗಬೇಕೆಂದಿದ್ದೇನೆ. ಬಸ್ಸಿನ ವೇಳಾಪಟ್ಟಿ ತಿಳಿಸುವಿರಾ ರಾಮ್?*
ಕಾಯುತ್ತಾ ಟೈಂ ವೇಸ್ಟ್ ಮಾಡಬೇಡಿ. ಬೆಳ್ಳಂದೂರು ಕೆರೆಯ ನೀರು ಕುಡಿಯಿರಿ; ತಕ್ಷಣ ಯಮಲೋಕಕ್ಕೆ ಡೋರ್ ಡೆಲಿವರಿ!

ಈ.ಎನ್. ರಮೇಶ್, ಬೆಂಗಳೂರು
*ಎರಡು ಕಣ್ಣು, ಎರಡು ಕಿವಿ ಕೊಟ್ಟ ದೇವ ಎರಡು ಬಾಯಿ ದಯಪಾಲಿಸಿದ್ದರೆ?*
ಎರಡೂ ಒಟ್ಟೊಟ್ಟಿಗೆ ಮಾತನಾಡಿ, ಏನೂ ಅರ್ಥವಾಗದೆ ಎರಡೂ ಕಿವಿ ಮುಚ್ಚಿಕೊಳ್ಳಬೇಕಾಗುತ್ತಿತ್ತು.

■ ರಾಮ್